ದಿ: 15.07.2025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.**

**ಸಿ ಸಿ ನಂಃ 1027/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಗುರುಮೂರ್ತಿ | ಪಿ.ಡಬ್ಲ್ಯೂ | : 1 |
| ತಂದೆಯ ಹೆಸರು | : ರಾಮಣ್ಣ | ಸಿ.ಡಬ್ಲ್ಯೂ | : 2 |
| ವಯಸ್ಸು | : 29 ವರ್ಷ | ದಿನಾಂಕ | :15.07.2025 |
| ಉದ್ಯೋಗ | : ವಿದ್ಯಾರ್ಥಿ | | |
| ವಾಸಸ್ಥಳ | : ಶಿವಗಂಗಾ ಗ್ರಾಮ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, 3, 4 ಮತ್ತು 8 ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ13.04.2023 ರಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಸದರಿ ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ13.04.2023 ರಂದು ಶೋಧನಾ ಸಮುಚಿತ ವಾರೆಂಟ್ ಆಗಿದ್ದು, ಸದರಿ ವಾರೆಂಟ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ13.04.2023 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಸ್ವತ್ತಿನ ಪಟ್ಟಿಯಾಗಿದ್ದು, ಸದರಿ ಸ್ವತ್ತಿನ ಪಟ್ಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ13.04.2023 ರಂದು ಈ ಪ್ರಕರಣದಲ್ಲಿ ತಯಾರಿಸಿದ ಮಾದರಿ ಮೊಹರಿನ ನಕಲಾಗಿದ್ದು,

ದಿ: 15.07.2025

ಸದರಿ ಮಾದರಿ ಮೊಹರಿನ ನಕಲನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಈ ಪ್ರಕರಣದಲ್ಲಿ ದಿಃ13.04.2023 ರಂದು ಮಾಡಿದ ಸ್ಥಳ ಪಂಚನಾಮೆಯಾಗಿದ್ದು, ಸದರಿ ಸ್ಥಳ ಪಂಚನಾಮೆಯನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಸ್ತುಗಳ ಮೇಲೆ ಅಂಟಿಸಿರುವ ಪಂಚರ ಸಹಿಯುಳ್ಳ ಮಾದರಿ ಚೀಟಿಯನ್ನು ತೋರಿಸಿದ್ದು, ಸದರಿ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮುದ್ದೆ ಮಾಲಿನ ವಸ್ತುಗಳನ್ನು ಎಂ.ಓ.1 ಎಂದು ಗುರುತಿಸಲಾಯಿತು. ಸದರಿ ಎಂ.ಓ.1 ರ ಮೇಲಿ ಅಂಟಿಸಿರುವ ಸಾಕ್ಷಿಯ ಸಹಿಯುಳ್ಳ ಚೀಟಿಯನ್ನು ಎಂ.ಓ.1(ಎ) ಎಂದು ಗುರುತಿಸಲಾಯಿತು.

ನಿಪಿ-1 ರಿಂದ 5 ಮತ್ತು ಎಂ.ಓ.1 ರ ಮೇಲಿನ ಸಹಿಯನ್ನು ಈಗ್ಗೆ ಸುಮಾರು 02 ವರ್ಷಗಳ ಹಿಂದೆ ಹೊಳಲ್ಕೆರೆಯಲ್ಲಿ ಅಬಕಾರಿ ಪೊಲೀಸ್ ನವರು ಸದರಿ ಸಹಿಗಳನ್ನು ಪಡೆದಿರುತ್ತಾರೆ. ನಾನು ನಿಪಿ-5 ಕ್ಕೆ ಸಹಿ ಮಾಡುವಾಗ ಬೇರೆ ಯಾರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಮತ್ತು ಮಧ್ಯವನ್ನು ವಶಪಡಿಸಿಕೊಂಡಿಲ್ಲ. ನಿಪಿ.1 ರಿಂದ 5 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ದಿ:13.04.2023 ರಂದು ರಾತ್ರಿ 07.45 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ಹೊಳಲ್ಕೆರೆ ಟೌನ್ ನ ಗಣಪತಿ ಸರ್ಕಲ್ ಬಳಿ ನಿಂತಿದ್ದಾಗ ನಮ್ಮಗಳ ಹತ್ತಿರ ಸರ್ಕಾರಿ ವಾಹನದಲ್ಲಿ ಬಂದ ಅಬಕಾರಿ ಅಧಿಕಾರಿಗಳು ಅವರನ್ನು ಪರಿಚಯಿಸಿಕೊಂಡು, 2023 ರ ಸಾರ್ವತ್ರಿಕ ವಿಧಾನ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರಯುಕ್ತ ತಮ್ಮ ಸಿಬ್ಬಂದಿಯೆಂದಗೆ

ದಿ: 15.07.2025

ಗಸ್ತು ಕಾರ್ಯ ನಿರ್ವಹಿಸುತ್ತಿರುವಾಗ ಒಬ್ಬ ಆಸಾಮಿಯು ತನ್ನ ವಾಹನದಲ್ಲಿ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುವ ಸಲುವಾಗಿ ಸ್ವಾಧೀನ ಹೊಂದಿ ಸಾಗಣಿಕೆ ಮಾಡುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಈ ಸಂಬಂಧ ಯಾವುದಾದರೂ ಅಬಕಾರಿ ಕ್ರಮಗಳು ಕಂಡು ಬಂದರೆ ಪಂಚರಾಗಿ ಸಹಕರಿಸಿ ಎಂದು ನನಗೆ ಕೋರಿಕೊಂಡಿದ್ದು, ನಾನು ಒಪ್ಪಿರುತ್ತೇನೆಂದರೆ ಸರಿಯಲ್ಲ. ತದನಂತರ ನಾನು, ಅಬಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳು ಸರ್ಕಾರಿ ವಾಹನದಲ್ಲಿ ಹೊಳಲ್ಕೆರೆ – ಶಿವಮೊಗ್ಗ ರಸ್ತೆಯಲ್ಲಿರುವ ಪೊಲೀಸ್ ವಸತಿ ಗೃಹದ ಮಂಭಾಗದ ರಸ್ತೆಯಲಿ ರಸ್ತೆ ಗಾವಲು ನೆಡೆಸುತ್ತಿದ್ದಾಗ ಒರ್ವ ವ್ಯಕ್ತಿಯು ದ್ವಿಚಕ್ರ ವಾಹನದಲ್ಲಿ ಶಿವಮೊಗ್ಗ ರಸ್ತೆಯಿಂದ ಹೊಳಲ್ಕೆರೆಗೆ ಹೋಗುತ್ತಿರುವುದನ್ನು ಕಂಡು ಅಬಕಾರಿ ಅಧಿಕಾರಿಗಳು ಸದರಿ ವಾಹನವನ್ನು ನಿಲ್ಲಿಸಲು ಸೂಚಿಸಲಾಗಿ ಸಮವಸ್ತ್ರದಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಕಂಡು ದ್ವಿಚಕ್ರ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಕತ್ತಲಲ್ಲಿ ಓಡಿ ಹೋಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಆತನನ್ನು ಹಿಡಿಯಲು ಎಷ್ಟೇ ಪ್ರಯತ್ನಿಸಿದರೂ ಆತ ಕತ್ತಲಲ್ಲಿ ತಪ್ಪಿಸಿಕೊಂಡು ಓಡಿ ಹೋಗಿ ಪರಾಗಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಅಧಿಕಾರಿಗಳು ಓಡಿ ಹೋದ ವ್ಯಕ್ತಿಯ ಬಗ್ಗೆ ಸ್ಥಳೀಯರಲ್ಲಿ ವಿಚಾರಿಸಲಾಗಿ ಕರಿಯಪ್ಪ ತಂದೆ ತಿಪ್ಪೇಸ್ವಾಮಿ ಎಂದು ತಿಳಿಸಿದ್ದು, ಬಾತ್ಮಿ ಬಂದ ವ್ಯಕ್ತಿ ಅವನೇ ಎಂದು ಖಚಿತ ಪಡಿಸಿಕೊಂಡು ಅಧಿಕಾರಿಗಳು ಸದರಿ ವಾಹನದ ಹತ್ತಿರ ಹೋಗಿ ನೋಡಿದಾಗ ವಾಹನದ ಮುಂಭಾಗದ ಪುಟ್ ರೆಸ್ಟ್ ದಲ್ಲಿ ಒಂದು ಪ್ಲಾಸ್ಟಿಕ್ ಚೀಲವನ್ನು ಇಟ್ಟುಕೊಂಡಿರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಸದರಿ ವಾಹನವನ್ನು ಶೋಧನೆ ಮಾಡಲು ತೀರ್ಮಾನಿಸಿ ಶೋಧನಾ ವಾರೆಂಟ್ ತರಲು ಅವಕಾಶ ಇಲ್ಲದೇ ಇರುವುದರಿಂದ ಅಧಿಕಾರಿಗಳು ಸ್ಥಳದಲ್ಲಿಯೇ ಶೋಧನಾ ವಾರೆಂಟ್ ತಯಾರಿಸಿ ನಮ್ಮಗಳ ಸಹಿಯನ್ನು ಪಡೆದುಕೊಂಡು ಪರಸ್ಪರ ಅಂಗಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಅಬಕಾರಿ ವಸ್ತುಗಳು ಇಲ್ಲವೇಂದು ಖಚಿತ ಪಡಿಸಿಕೊಂಡು ನಮ್ಮ ಸಮಕ್ಷಮ ಶೋಧನಾ ಕಾರ್ಯವನ್ನು ಪ್ರಾರಂಭಿಸಿದಾಗ ರಾತ್ರಿ 08.00 ಗಂಟೆ ಸಮಯವಾಗಿದ್ದು, ನಮ್ಮ ಸಮಕ್ಷಮ ಶೋಧನೆ ನೆಡಸಲಾಗಿ ವಾಹನವು ಬಿಳಿ ಬಣ್ಣದಿಂದ ಕೊಡಿದ್ದು, ಹೋಂಡಾ ಕಂಪನಿಯ ಆಕ್ಟಿವಾ 5–ಜಿ ಸ್ಕೂಟಿಯಾಗಿದ್ದು, ನೊಂದಣಿ ಸಂಖ್ಯೆ ಇರುವುದಿಲ್ಲ ಮತ್ತು ಚಾಸಿ ನಂ. ME4JF50AFJT219698 ಹಾಗೂ ಇಂಜಿನ್ ನಂ. JF0E–T–7219757 ಆಗಿದ್ದು, ಸದರಿ ವಾಹನಗಳ ದಾಖಲೆಗಳನ್ನು ಹುಡಕಲಾಗಿ ಯಾವುದೇ ದಾಖಲೆಗಳು ದೊರೆತಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಗಳು ಕಂಡು ಬಂದಿದ್ದವು ಎಂದರೆ

ಸರಿಯಲ್ಲ. ಸದರಿ ಪ್ಯಾಕೆಟ್ ಗಳನ್ನು ಎಣಿಸಿ ನೋಡಲಾಗಿ 1. ರಾಜಾ ವಿಸ್ಕಿಯ 90 ಮಿಲಿಯ 288 ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಗಳು ಇದ್ದು, ಅವು ಒಟ್ಟು 25.920 ಲೀಟರ್ ಇದ್ದವು ಎಂದರೆ ಸರಿಯಲ್ಲ. ತದನಂತರ ಅಧಿಕಾರಿಗಳು ಈ ರೀತಿ ಸ್ವಾಧೀನ ಮಿತಿಗಿಂತ ಹೆಚ್ಚಿಗೆ ಅಕ್ರಮ ಮಧ್ಯವನ್ನು ಹೊಂದಿ ಸಾಗಾಣಿಕೆ ಮಾಡುವುದು ಅಪರಾಧ ಮಾಡುವುದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ದೊರೆತ ಎಲ್ಲಾ ಮುದ್ದೆ ಮಾಲುಗಳನ್ನು ಮತ್ತು ದ್ವಿಚಕ್ರ ವಾಹನವನ್ನು ಪಂಚನಾಮೆಯ ಅಡಿಯಲ್ಲಿ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ವಶಪಡಿಸಿಕೊಂಡ ಟೇಟ್ರಾ ಪ್ಯಾಕೆಟ್ ಗಳನ್ನು ಮಾದರಿಗಾಗಿ ತೆಗೆದು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾದರಿ ಮೊಹರಿನ ನಕಲು ಮತ್ತು ಮಾದರಿ ಚೀಟಿಗಳನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದು ಸದರಿ ವಸ್ತುಗಳ ಮೇಲೆ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮುದ್ದೆ ಮಾಲುಗಳನ್ನು ಇಲಾಖೆಯ ವಶಕ್ಕೆ ಪಡೆದು ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-5 ನ್ನು ನಮ್ಮ ಸಮಕ್ಷಮ ರಾತ್ರಿ 08.00 ರಿಂದ 09.30 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ22.07.2023 ರಂದು ಈ ಮೇಲೆ ಹೇಳಿದಂತೆ ಅಬಕಾರಿ ಪೊಲೀಸರ ಮುಂದೆ ಈ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಒಟ್ಟು ಮಧ್ಯದ ಪೌಚ್ ಗಳನ್ನು ನನ್ನ ಸಮಕ್ಷಮ ನಿಪಿ-5 ರಂತೆ ಮಹಜರ್ ನಂತೆ ಸದರಿ ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ

ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ದಿಃ 15.07.2025

**ಜೆಎಂಎಫ್‌ಸಿ, ಹೊಳಲ್ಕೆರೆ.**